# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

ಅಸಲು ದಾವಾ ನಂಃ 28/2018
ಪಿ.ಡಬ್ಲ್ಯೂಃ 1

ದಿನಾಂಕ 20-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು ಃ- ಶ್ರೀ ಎಮ್ ಎ ಕೆ ವಕೀಲರಿಂದ

ನನಗೆ 3 ಜನ ಹೆಣ್ಣು ಮಕ್ಕಳಿದ್ದಾರೆ. ಅವರ ಹೆಸರು ಬಾನುಬೀ, ಮುನ್ನಿರಾಬೀ ಮತ್ತು ಇಲ್ಮಾಯಿಲಬೀ. ನನ್ನ 3 ಜನ ಹೆಣ್ಣು ಮಕ್ಕಳ ಮದುವೆಯಾಗಿರುತ್ತದೆ. ನನ್ನ ಸ್ವಂತ ಆಸ್ತಿ 4 ಎಕರೆ ಜಮೀನನ್ನು 3 ಜನ ಹೆಣ್ಣು ಮಕ್ಕಳಿಗೆ ಕೋಟ್ಟಿದ್ದೇನೆ. ಸದರಿ 4 ಎಕೆರೆ ಜಮೀನು ಸರ್ವೆ ನಂಬರ 85 ಅನುವುದು ನಿಜ. ಆ ಜಮೀನಿನಲ್ಲಿ 38 ಗುಂಟೆ ಇಸ್ಮಾಯಿಲ್ ಬೀ ಗೆ ಕೋಟ್ಟಿದ್ದೇನೆ ಅನುವುದು ನಿಜ. ಸದರ ಜಮೀನು ಪೋಡಿಯಾಗಿ ಇಸ್ಮಾಯಿಲ್ ಬೀ ಗೆ ಬಂದಿರುವ ಜಮೀನು ಸರ್ವೆ ನಂಬರ 85 ಅನುವುದಿ ನಿಜ. ಅದೇ ರೀತಿ ಸರ್ವೆ ನಂಬರ 85/1 ನಲ್ಲಿ 36 ಗುಂಟೆ ನನ್ನ ಮಗಳು ಬಾನುಬೀಗೆ ಕೋಟ್ಟಿರುವುದು ನಿಜ. ಹಾಗೂ ಸರ್ವೆ ನಂಬರ 85/3 ನಲ್ಲಿ 36 ಗುಂಟೆ ಜಮೀನು ನನ್ನ ಇನ್ನೊರ್ವ ಮಗಳಾದ ಮುನ್ನಿರಾಬೀಗೆ ಕೋಟ್ಟಿರುವುದು ನಿಜ. ಸರ್ವೆ ನಂಬರ 85 4 ಎಕರೆ ಜಮೀನು ನಾನೇ ಖರಿದಿಸಿದ್ದೇನೆ ಅನುವುದು ನಿಜ. ಸದರಿ ಜಮೀನಿನ ಪಹಣಿಗಳು 1988-89 ರಿಂದ ನನ್ನ ಹೆಸರಿನಲ್ಲಿವೆ ಅನುವುದು ನಿಜ. ಸದರಿ ಪಹಣಿಗಲ್ಲಿ ನನ್ನ ಹೆಸರು ಮಾಲಾಬೀ ತಾಯಿ ಮಹಿಬೂಬೀ ಎಂದು ನಮೂದಾಗಿದೆ ಅನುವುದು ನಿಜ. ನನ್ನ ತಾಯಿಗೆ ಇನ್ನೊಂದು ಹೆಸರು ಮಕತ್ಮ ಎಂತಲುವಾ ಕರೆಯತ್ತಾರೆ. ನಾನು ಸದರಿ ಜಮೀನು ಖರಿದಿಸಿದ ಲಾಗಾಯತಯಿಂದ ಮಾಲಾಬೀ ತಾಯಿ ಮಹಿಬೂಬಿ ಎಂದು ಇರುವುದು ನಿಜ. ಸರ್ವೆ ನಂಬರ 85 ಮೋದಲು 85/ಇ ಎಂದು ಇತ್ತು ಅನುವುದು ನಿಜ.

ನಾನು ಚಿತ್ತಾಪೂರ ತಾಲ್ಲೂಕಿನ ಹೆಬಾಳದ ಗ್ರಾಮದಲ್ಲಿರುತೇನೆ ಮತ್ತು ಅಲ್ಲಿಯೇ ಮತ ಚಾಲಾಯಿಸುತ್ತೇನೆ ಅನುವುದು ನಿಜ. ನನ್ನ ತಾಯಿಗೆ ಮಹಿಬೂಬೀ ಅಲ್ಲದೆ ಮೇಹತಾಬೀ ಅಥವಾ ಮೇಹತಾಬೀ ಎಂದು ಕರೆಯತ್ತಾರೆ ಎಂದು ತೋರಿಸುವ ಯಾವವುದೇ ದಾಖಲೆ ಹಜಾಜರು ಮಾಡಿಲಲ. ಆದರೆ ನನ್ನ ಗಂಡನ ಹೆಸರು ರಸೂಲ ಸಾಬ್ ಇರುವ ಬಗ್ಗೆ ದಾಖಲೆಗಳನಳ್ನು ಹಾಜರು ಮಾಡಿದ್ದೇನೆ. ಆದರೆ ಈ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡದೆ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾನು ಅಬ್ದುಲ್ ಅಜೀಜ್ ಮತ್ತು ಅಬ್ದುಲ್ ಹಮ್ಮೀದ್ ಮಖ್ತಾ ಬೀ ಇವರು ಮಕ್ಕಳು ಎಂದು ತೋರಿಸುವ ದಾಖಲೆ ಹಾಜರು ಮಾಡಿಲ್ಲ. ಅಂದರೆ ಸರಿಯಲ್ಲ. ಅಬ್ದುಲ್ ಹಜೀಜ್ ಮತ್ತು ಅಬ್ಮುಲ ಹಮೀದ್ ಮಹಿತ್ತಾಬಿ ಇವರ ಮಕ್ಕಳು ಅನುವುದು ನಿಜ. ಆದರೆ ನನ್ನ ತಾಯಿಯ ಹೆಸರು ಮಹಿಬೂಬ ಅನುವುದು ಸರಿಯಲ್ಲ. ನನ್ನ ತಾಯಿ ಹಾಗೂ ಅಬ್ದುಲ್ ಅಜೀಜ್ ಮತ್ತು ಅಬ್ದುಲ್ ಹಮೀದ್ ಇವರ ತಾಯಿ ಬೇರೆ ಬೇರೆ ಅನುವುದು ಸರಿಯಲ್ಲ. ನನ್ನ ಗಂಡನ ಹೆಸರು ರಸೂಲ ಸಾಬ ಎಂದು ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ.

**ಅಸಲು ದಾವಾ ನಂಃ 28/2018,**
**ಪಿ.ಡಬ್ಲ್ಯೂಃ 1**

ನಾನು ಹೆಬ್ಬಾಳ ಗ್ರಾಮದ ಸರಕಾರಿ ಶಾಲೆಯ ಹೊಸ ಕಟ್ಟಡದಲ್ಲಿ ಮತ ಚಾಲಾಯಿಸಿದ್ದೇನೆ ಅನುವುದು ನಿಜ. ಮತದಾರರ ಪಟ್ಟಿಯಲ್ಲಿ ಭಾಗ ಸಂಖ್ಯೆ 205 ಮತ್ತು ಕ್ರಮ ಸಂಖ್ಯೆ 512 ಇದೆ ಅನುವುದು ನಿಜ. ಈ ಪ್ರಕಾರ ನನಗೆ ಸರಕಾರದಿಂದ ಮತದಾರರ ಗುರುತಿನ ಪತ್ರ ಕೋಟ್ಟಿದ್ದಾರೆ ಅನುವುದು ನಿಜ. ಸದರಿ ಮತದಾರರ ಪಟ್ಟಿಯಲ್ಲಿ ನನ್ನ ಗಂಡನ ಹೆಸರು ಚಂದ್ರಶೇಟ್ಟಿ ಇದೆ ಎಂದರೆ ಸುಳ್ಳು. ಸಾಕ್ಷಿಯು ಪುನಃ ಹೇಳುತ್ತಾರೆ ಗಂಡನ ಹೆಸರು ರಸೂಲ ಸಾಬ್. ನನ್ನ ಗಂಡನ ಹೆಸರು ದಾಖಲೆಯ ಪ್ರಕಾರ ಚಂದ್ರಶೇಟ್ಟಿ ಇದ್ದರೂ ಸಹ ರಸೂಲ್ ಸಾಬ್ ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ.

ಮೇಹತಾಬೀಗೆ ಅಬ್ದುಲ್ ಅಜೀಜಿ ಮತ್ತು ಅಬ್ದುಲ್ ಹಮೀದ್ ಇಬ್ಬರೂ ಮಕ್ಕಳೇ ಅನುವುದು ನಿಜ. ಮೇಹತಾಬೀ ಜೀವಂತ ಇರುವಾಗಲೇ ಅಬ್ದುಲ್ ಅಜೀಜಿ ಮೃತಪಟ್ಟಿದ್ದಾನೆ ಅನುವುದು ನಿಜ. ಮೇಹತಾಬೀ ತನ್ನ ಮಗ ಅಬ್ದುಲ್ ಹಮೀದ್ ಇತನ ಹೆಂಡತಿ ಅಸಕರಿ ಬೇಗಂಗೆ ಸರ್ವೆ ನಂಬರ 140/2 ನಲ್ಲಿ 4 ಎಕರೆ 32 ಗುಂಟೆ ಮತ್ತು ಅವರ ಮಗ ಅಬ್ದುಲ್ ರಹಿಮಾನಗೆ ಸರ್ವೆ ನಂಬರ 139/9 ನಲ್ಲಿ 9 ಎಕರೆ 30 ಗುಂಟೆ ಜಮೀನು ದಾನ ಕೋಟ್ಟಿದ್ದಾರೆ ಅನುವುದು ಸುಳ್ಳು. ಆ ಜಮೀನುಗಳ ಬಗ್ಗೆ ಅಸಕರಿ ಬೇಂಗಂ ಮತ್ತು ಅಬ್ದುಲ್ ರಹೀಮಾನ ಚಿತ್ತಾಪೂರಿನ ಸಿವಿಲ್ ನ್ಯಾಯಾಲದಲ್ಲಿ ಮೇಹತಾಬೀ ವಿರುದ್ಧ ಘೋಷಣಾತ್ಮಕ ದಾವೆ ಸಂಖ್ಯೆ ಕ್ರಮವಾಗಿ 46, 47/1977 ಸಲ್ಲಿಸಿದ್ದರೂ ಅನುವುದು ಗೊತ್ತಿಲ್ಲ. ಸದರಿ ದಾವೆಗಳು ಅವರ ಪರವಾಗಿ ಡಿಕ್ರಿಯಾಗಿವೆ ಅನುವುದು ಗೊತ್ತಿಲ್ಲ. ಆ ಡಿಕ್ರಿ ಪ್ರಕಾರ ಇಬ್ಬರೂ ಆ ಜಮೀನುಗಳಿಗೆ ಮಾಲಿಕರಾಗಿ ಬೇರೆಯವರಿಗೆ ಈಗಾಗಲೇ ಮಾರಾಟ ಮಾಡಿದ್ದಾರೆ ಅನುವುದು ನಿಜ.

ದಾವೆಯ ಸ್ವತ್ತಿಗೆ ಮೇಹತಾಬೀ ತಾನು ಜೀವಂತ ಇರುವವರೆಗೆ ಮಾಲಿಕಳು ಮತ್ತು ಸ್ವಾಧೀನರಾಗಿದ್ದರೂ ಅನುವುದು ನಿಜ. ದಾವಾ ಜಮೀನು ಸರ್ವೆ ನಂಬರ 140/3 ಒಟ್ಟು 8 ಎಕಟೆ 25 ಗುಂಟೆ ಜಮೀನಿಗೆ ಮೃತಪಟ್ಟನಂತರ ಅವರ ಮಗ ಅಂದರೆ ಪ್ರತಿವಾದಿ ಮಾತ್ರ ವಾರಸುದಾರನಾಗುತ್ತಾನೆ ಅನುವುದು ಸರಿಯಲ್ಲ. ಅದೇ ರೀತಿ ಸದರಿ ಜಮೀನು ಪ್ರತಿವಾದಿಯ ಸ್ವಾಧೀನದಲ್ಲಿವೆ ಅನುವುದು ಸುಳ್ಳು. ಸಾಕ್ಷಿಯು ಸ್ವತ್ತಿನಲ್ಲಿ ನಾನು ಇದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂಬರ 140/3 ನ ಬಗ್ಗೆ ಪ್ರತಿವಾದಿ ಚಿತ್ತಾಪೂರಿನ ಸಿವಿಲ್ ನ್ಯಾಯಾಲಯದಲ್ಲಿ ಘೊಷಣಾತ್ಮಕ ದಾವೆ ಸಲ್ಲಿಸಿದ್ದಾನೆ ಅನುವುದು ಗೊತ್ತಿಲ್ಲ, ಸದರ ದಾವೆ ಸಂಖ್ಯೆ 83/2009 ಬೇಗೆ ವ್ಯಕ್ತಿಯ ಮೇಲೆ ಆಸ್ತಿ ಅಡಮಾನು ಸಂಬಂಧ ಈಗಾಗಲೇ ತಿರ್ಮಾನವಾಗಿದೆ ಅನುವುದು ನನಗೆ ಗೋತ್ತಿಲ್ಲ. ಈ ದಾವೆಯ ಸ್ವತ್ತಿನ ಕುರಿತು ಕಲಬುರಗಿಯ ಡಿ ಡಿ ಎಲ್ ಆರ್ ಕಛೇರಿಯಲ್ಲಿ ಇನ್ನೊಂದು ಪ್ರಕರಣ ನಡೆದಿತ್ತು ಅನುವುದು ನಿಜ.

ನಾನು ದಾವಾ ಸ್ವತ್ತಿಗೆ ಯಾವುದೇ ರೀತಿಯ ಸಂಬಧಪಡುವುದಿಲ್ಲ ಆದ್ದರಿಂದಲೇ ಈ ಹಿಂದಿನ ಪ್ರಕರಣಗಳಲ್ಲಿ ನಾನು ಸೇರಿಲ್ಲ ಅನುವುದು ಸರಿಯಲ್ಲ. ನಾನು ಪ್ರತಿವಾದಿಗೆ ಮತ್ತು ಅವರ ಕುಂಟುಂಬಕ್ಕೆ ಯಾವತ್ತು ಸಂಬಧಿಕಳಲ್ಲ ಆದರೂ ಸಹ ಆಸ್ತಿ ಕಂಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ**